# ಸುದ್ದಿಸಂಚಯ

◆ ರಥಯಾತ್ರೆಯ ಉತ್ಸವದ ಸಮಯದಲ್ಲಿ ಜಗನ್ನಾಥನ ಕ್ಷೇತ್ರವಾದ ಪುರಿಯ ರಾಮಕೃಷ್ಣ ಮಠವು ಜೂನ್ ೨೭ರಿಂದ ಜುಲೈ ೫ ರವರೆಗೆ ವೈದ್ಯಕೀಯ ಶಿಬಿರವನ್ನು ಏರ್ಪಡಿಸಿತ್ತು. ೨೧೭೪ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ೨೭,೦೩೦ ಯಾತ್ರಿಕರಿಗೆ ತಂಪು ಪಾನೀಯವನ್ನು ವಿತರಿಸಲಾಯಿತು.

◆ ಇದೇ ಸಂದರ್ಭದಲ್ಲಿ ರಾಮಕೃಷ್ಣ ಮಿಷನ್ ಕೇಂದ್ರವೂ ಕೂಡ ೨೫,೦೦೦ ಯಾತ್ರಿಕರಿಗೆ ಪಾನಕವನ್ನು ನೀಡಿದ್ದು, ಆರೋಗ್ಯ ಕೇಂದ್ರದ ಮೂಲಕವೂ ಸೇವೆ ಸಲ್ಲಿಸಿತು.

◆ ಝಾರ್‌ಖಂಡ್ ರಾಜ್ಯದ ರಾಂಚಿಯಲ್ಲಿರುವ ರಾಮಕೃಷ್ಣ ಆಶ್ರಮವು ರಾಷ್ಟ್ರೀಯ ತೋಟಗಾರಿಕೆ ಯೋಜನೆಯೊಂದಿಗೆ ಒಂದು ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು ರಾಂಚಿ ಜಿಲ್ಲೆಯ ೭೦ ಹಳ್ಳಿಗಳಲ್ಲಿ ಮಾವು, ಪಪ್ಪಾಯ, ಲಿಚ್ಚಿ ಹಾಗು ಇತರ ಹಣ್ಣಿನ ಸಸಿಗಳನ್ನು ನೆಡಲಾಗಿದೆ. ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಅರ್ಜುನ್ ಮುಂಡಾ ಅವರು ಜುಲೈ ೧೪ರಂದು ಈ ಕಾರ್ಯಕ್ರಮವನ್ನು ಗಿಡ ನೆಡುವುದರ ಮೂಲಕ ಉದ್ಘಾಟಿಸಿದರು.

◆ ಜರ್ಮನಿಯಲ್ಲಿ ನಡೆದ ರಾಸಾಯನಿಕ ಶಾಸ್ತ್ರದ ವಿಭಾಗ ದಲ್ಲಿ ನೊಬೆಲ್ ಪಾರಿತೋಷಕ ಪಡೆದವರ ಹದಿನೆಂಟನೆ ಸಮಾವೇಶದಲ್ಲಿ ಚೆನ್ನೈನಲ್ಲಿರುವ ವಿವೇಕಾನಂದ ಕಾಲೇಜಿನ ಪ್ರಸನ್ನ ವೆಂಕಟೇಶ್.ಆರ್ ಎಂಬ ವಿದ್ಯಾರ್ಥಿ ಭಾಗವಹಿಸಿದ್ದನು. ಅಂತಾರಾಷ್ಟ್ರೀಯ ವಿಜ್ಞಾನಿಗಳ ಮಟ್ಟದ ಸ್ಪರ್ಧೆಯಲ್ಲಿ ಈತನನ್ನು ಆಯ್ಕೆ ಮಾಡಲಾಗಿತ್ತು.

◆ ಮೇ, ಜೂನ್, ಜುಲೈ ತಿಂಗಳುಗಳ ಅವಧಿಯಲ್ಲಿ ಕರ್ನಾ ಟಕದ ಬೆಳಗಾವಿ, ಪಶ್ಚಿಮ ಬಂಗಾಳದ ಗರ್ಬೇಟ, ಮಧ್ಯ ಪ್ರದೇಶದ ನಾರಾಯಣಪುರ ಹಾಗೂ ಗುಜರಾತಿನ ಪೋರ ಬಂದರ್–ಈ ಪ್ರದೇಶಗಳಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರ ಗಳ ಮೂಲಕ ೩೨೮ ರೋಗಿಗಳ ನೇತ್ರತಪಾಸಣೆಯಾಗಿದ್ದು ೧೦೧ ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ. ಹದಿನೈದು ರೋಗಿಗಳಿಗೆ ಸೂಕ್ತವಾದ ಕನ್ನಡಕವನ್ನೂ ನೀಡಲಾಗಿದೆ.

◆ ಗುಜರಾತಿನಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹದಿಂದಾಗಿ ಬಹಳಷ್ಟು ಹಾನಿಯಾಗಿದ್ದು ರಾಜ್‌ಕೋಟ್ ಕೇಂದ್ರದ ಮೂಲಕ ಆನಂದ್ ಜಿಲ್ಲೆಯ ೧,೪೦೦ ಕುಟುಂಬಗಳಿಗೆ ಆಹಾರವನ್ನು ನೀಡುವ ವ್ಯವಸ್ಥೆ ಮಾಡಲಾಗಿದೆ.

◆ ಪಶ್ಚಿಮ ಬಂಗಾಳದ ಆಂಟ್‌ಪುರ್ ಕೇಂದ್ರವು ನಿರಾಶ್ರಿತರಿಗೆ ೫೦೦ ಕಂಬಳಿಗಳನ್ನು ನೀಡಿದೆ. ತಮಿಳುನಾಡಿನ ಉದಕ ಮಂಡಲದಲ್ಲಿರುವ ಕೇಂದ್ರವು ೪೦೦ ಕಂಬಳಿಗಳನ್ನು ನಿರಾಶ್ರಿತರಿಗೆ ನೀಡಿದೆ.

◆ ಮಧ್ಯಪ್ರದೇಶದ ಭೋಪಾಲ್ ನಗರದಲ್ಲಿ ರಾಮಕೃಷ್ಣ ಮಿಷನ್ನಿನ ನೂತನ ಕೇಂದ್ರವೊಂದನ್ನು ಪ್ರಾರಂಭಿಸಲಾಗಿದೆ. ಆಗಸ್ಟ್ ೬ರಂದು ನಡೆದ ವಿಶೇಷ ಕಾರ್ಯಕ್ರಮದಲ್ಲಿ ಮಧ್ಯ ಪ್ರದೇಶದ ರಾಜ್ಯಪಾಲರಾದ ಡಾ. ಬಲರಾಮ್ ಝಾಕರ್ ಅವರು ಹಾಗೂ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಭಾಗವಹಿಸಿದ್ದರು. ಆಗಸ್ಟ್ ೭ನೇ ತಾರೀಖಿನಂದು ನಡೆದ ಸಾರ್ವಜನಿಕ ಸಮಾರಂಭದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಶಿವರಾಜ ಸಿಂಗ್‌ಜಿ ಚೌಹಾಣ್ ಭಾಗವಹಿಸಿದ್ದರು. ಪೂಜೆ ಭಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೊಳಗೊಂಡ ಈ ಸಮಾರಂಭ ದಲ್ಲಿ ಅನೇಕ ಭಕ್ತರು ಸಕ್ರಿಯವಾಗಿ ಭಾಗವಹಿಸಿದರು.

**ಭೋಪಾಲ್ ಆಶ್ರಮದ ಕೆಲವು ದೃಶ್ಯಗಳು**



ಸ್ವಾಮಿ ವಿವೇಕಾನಂದರ ಪ್ರತಿಮೆ



ಗ್ರಂಥಾಲಯ